

بسم اللهِ الرّحمٰنِ الرّحيم

# ಬದ್ರ್ ಯುದ್ಧ – ಯುದ್ಧಾನಂತರದ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **14-07-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬದ್ರ್ ಯುದ್ಧಕ್ಕೆ ಸಂಬಂಧಿಸಿ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆ ಮತ್ತು ಘಟನೆಗಳ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಬದ್ರ್ ಯುದ್ಧ ಮುಕ್ತಾಯಗೊಂಡಿತು ಮತ್ತು ಸತ್ಯನಿಷೇಧಿಗಳನ್ನು ಅಲ್ಲಾಹನು ಅವರ ದುರ್ಗತಿಗೆ ತಲುಪಿಸಿದನು. ಎಪ್ಪತ್ತು ಸತ್ಯನಿಷೇಧಿಗಳು ಕೊಲ್ಲಲ್ಪಟ್ಟರು. ಅವರಲ್ಲಿ ಅನೇಕ ಮುಖಂಡರು ಮತ್ತು ಸರದಾರರು ಇದ್ದರು.

ಖುರೈಶಿ ಮುಖಂಡರನ್ನು ಹೂಳಲಾದ ಬಗ್ಗೆ ಸಹೀಹ್ ಬುಖಾರಿಯಲ್ಲಿ ಹೀಗೆ ಪ್ರಸ್ತಾಪವಿದೆ: ಒಂದು ಬಾರಿ ಹಝ್ರತ್ ಪೈಗಂಬರ್(ಸ) ಕಅ್‌ಬ ಭವನದಲ್ಲಿ ನಮಾಝ್ ನಿರ್ವಹಿಸುತ್ತಿದ್ದರು. ಅವರು ಸಜದ ಮಾಡುತ್ತಿದ್ದಾಗ ಮಕ್ಕಾದ ಸತ್ಯನಿಷೇಧಿಗಳು ಜಾನುವಾರಿನ ಗರ್ಭಾಶಯವನ್ನು ಅವರ ತೋಳುಗಳ ನಡುವೆ ಇರಿಸಿದರು. ಹಝ್ರತ್ ಪೈಗಂಬರ್(ಸ)ರಿಗೆ ಸಜದದಿಂದ ಏಳಲಾಗಲಿಲ್ಲ. ಸತ್ಯನಿಷೇಧಿಗಳು ಅದನ್ನು ನೋಡಿ ನಗುತ್ತಿದ್ದರು. ಕೊನೆಗೆ ಹಝ್ರತ್ ಫಾತಿಮ(ರ) ಅಲ್ಲಿಗೆ ಬಂದರು ಮತ್ತು ಆ ಭಾರದ ವಸ್ತುವನ್ನು ಹಝ್ರತ್ ಪೈಗಂಬರ್(ಸ)ರ ಹೆಗಲುಗಳ ಮೇಲಿನಿಂದ ನೀಗಿಸಿದರು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನೀನು ಖುರೈಶಿಯರನ್ನು ಹಿಡಿಗೂಡು. ಅನಂತರ ಹಝ್ರತ್ ಪೈಗಂಬರ್(ಸ) ಅಮ್ರ್ ಬಿನ್ ಹಿಶಾಮ್, ಉತ್ಬ ಬಿನ್ ರಬೀಅ, ಶೈಬ ಬಿನ್ ರಬೀಅ, ವಲೀದ್ ಬಿನ್ ಉತ್ಬ, ಉಮಯ್ಯ ಬಿನ್ ಖಲ್‌ಫ್ ಮತ್ತು ಇತರ ಕೆಲವು ಸತ್ಯನಿಷೇಧಿಗಳ ಹೆಸರುಗಳನ್ನು ಎತ್ತಿ ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಅವರನ್ನು ಹಿಡಿಗೂಡು. ವರದಿಗಾರರಾದ ಹಝ್ರತ್ ಅಬ್ದುಲ್ಲಾಹ್(ರ) ಹೇಳುತ್ತಾರೆ: ಅಲ್ಲಾಹನಾಣೆ, ಬದ್ರ್ ಯುದ್ಧದ ದಿನದಂದು ಇವರೆಲ್ಲರೂ ಬಿದ್ದದ್ದನ್ನು ನಾನು ಸ್ವತಃ ನೋಡಿದೆ. ಅನಂತರ ಅವರೆಲ್ಲರ ಶವಶರೀರಗಳನ್ನು ಎಳೆದುಕೊಂಡು ಬದ್ರ್ ಮೈದಾನದಲ್ಲಿದ್ದ ಹೊಂಡಕ್ಕೆ ಎಸೆಯಲಾಯಿತು. ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ಹೊಂಡದಲ್ಲಿರುವವರು ಶಾಪಗ್ರಸ್ತರು.

ಹಝ್ರತ್ ಅಬೂತಲ್‌ಹ ಅನ್ಸಾರಿ(ರ) ವರದಿ ಮಾಡುತ್ತಾರೆ: ಬದ್ರ್ ಯುದ್ಧದಂದು ಸತ್ಯನಿಷೇಧಿಗಳ 24 ಮಂದಿಗಳನ್ನು ಬದ್ರಿನ ಬಾವಿಗೆ ಹಾಕಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದರು. ಬದ್ರ್ ಮೈದಾನದಿಂದ ಮರಳಿ ಬರುವಾಗ ಹಝ್ರತ್ ಪೈಗಂಬರ್(ಸ) ಆ ಬಾವಿಯ ಅಂಚಿನ ಸಮೀಪ ನಿಂತುಕೊಂಡು ಆ ಸತ್ಯನಿಷೇಧಿಗಳನ್ನು ಅವರ ತಂದೆಯ ಹೆಸರಿನೊಂದಿಗೆ ಕರೆದು ಹೀಗೆ ಹೇಳಿದರು: ನೀವು ಅಲ್ಲಾಹನನ್ನು ಮತ್ತು ಅವನ ಪ್ರವಾದಿಯನ್ನು ಅನುಸರಿಸುತ್ತಿದ್ದರೆ ಎಷ್ಟು ಚೆನ್ನಾಗಿತ್ತು! ಅಲ್ಲಾಹನು ತನ್ನ ಪ್ರವಾದಿಗೆ ವಾಗ್ದಾನ ಮಾಡಿದ ಎಲ್ಲವನ್ನು ನಾವು ಗಳಿಸಿದೆವು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಯನ್ನು ಹೀಗೆ ಪ್ರಸ್ತಾಪಿಸುತ್ತಾರೆ: "ಎಲೈ ಹೊಂಡದಲ್ಲಿರುವವರೇ, ನೀವು ನನ್ನ ವಿರುದ್ಧ ಯುದ್ಧ ಮಾಡಿದಿರಿ, ಇತರರು ನನಗೆ ಸಹಾಯ ಮಾಡಿದರು" ಎಂಬ ಹಝ್ರತ್ ಪೈಗಂಬರ್(ಸ)ರ ಮಾತಿನಿಂದ ಸ್ಪಷ್ಟವಾಗುವುದೇನೆಂದರೆ, ಯುದ್ಧಗಳನ್ನು ಆರಂಭಿಸಿದ್ದು ಸತ್ಯನಿಷೇಧಿಗಳಾಗಿದ್ದರು ಎಂದು ಸ್ವತಃ ಹಝ್ರತ್ ಪೈಗಂಬರ್(ಸ) ದೃಢವಾಗಿ ನಂಬಿದ್ದರು. ಹಝ್ರತ್ ಪೈಗಂಬರ್(ಸ) ಯಾವುದೇ ನಿರ್ವಾಹವಿಲ್ಲದೇ ಕೇವಲ ಸ್ವಯಂ ರಕ್ಷಣೆಗಾಗಿ ಖಡ್ಗವನ್ನು ಎತ್ತಿಕೊಳ್ಳಬೇಕಾಯಿತು.

ಚರಿತ್ರೆಯ ಗ್ರಂಥಗಳಲ್ಲಿ ಬದ್ರ್ ಯುದ್ಧದ ಪ್ರಸ್ತಾಪದಲ್ಲಿ ಹಝ್ರತ್ ಪೈಗಂಬರ್(ಸ)ರ ಕೆಲವು ಅದ್ಭುತ ದೃಷ್ಟಾಂತಗಳ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಉಕಾಶ ಬಿನ್ ಮುಹ್‌ಸಿನ್(ರ)ರ ಕುರಿತು ಹೀಗೆ ಪ್ರಸ್ತಾಪಿಸಲಾಗಿದೆ: ಬದ್ರ್ ದಿನದಂದು ಅವರು ತನ್ನ ಖಡ್ಗದಿಂದ ಸೆಣಸಾಡುತ್ತಿದ್ದರು. ಕೊನೆಗೆ ಅವರ ಖಡ್ಗ ತುಂಡಾಯಿತು. ಆಗ ಅವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಅವರಿಗೆ ಒಂದು ಬೆತ್ತವನ್ನು ಕೊಟ್ಟು "ನೀನು ಇದರೊಂದಿಗೆ ಸತ್ಯನಿಷೇಧಿಗಳ ವಿರುದ್ಧ ಹೋರಾಡು" ಎಂದು ಹೇಳಿದರು. ಉಕಾಶ(ರ) ಆ ಬೆತ್ತವನ್ನು ಖಡ್ಗದ ಹಾಗೆ ಉಪಯೋಗಿಸಿಕೊಂಡರು.

ಮಕ್ಕದಲ್ಲಿ ಸತ್ಯನಿಷೇಧಿಗಳ ಸೋಲಿನ ವಾರ್ತೆ ಹೇಗೆ ತಲುಪಿತು ಎಂಬುದರ ಬಗ್ಗೆ ಪ್ರಸ್ತಾಪವಿದೆ. ಯುದ್ಧ ಮುಗಿದ ನಂತರ ಮುಶ್ರಿಕರು ಗಾಬರಿಗೊಂಡು ಮಕ್ಕದ ಕಡೆಗೆ ಓಡುತ್ತಾ ಹೋದರು. ಹೇಗೆ ಮಕ್ಕಾವನ್ನು ಪ್ರವೇಶಿಸುವುದು ಎಂದು ನಾಚಿಕೆ ಮತ್ತು ಲಜ್ಜೆಯ ಕಾರಣದಿಂದ ಅವರಿಗೆ ಗೊತ್ತಾಗುತ್ತಿರಲಿಲ್ಲ. ಖುರೈಶಿ ಮುಖಂಡರ ನಾಶದ

ವಾರ್ತೆಯನ್ನು ಸತ್ಯನಿಷೇಧಿಗಳು ಮಕ್ಕಾ ನಿವಾಸಿಗಳಿಗೆ ಮುಟ್ಟಿಸಿದಾಗ ಅವರಿಗೆ ಅದನ್ನು ನಂಬಲು ಸಾಧ್ಯವಾಗುತ್ತಿರಲಿಲ್ಲ. ವಧಿಸಲ್ಪಟ್ಟವರಿಗಾಗಿ ಶೋಕಾಚರಣೆ ಮಾಡುವುದರಿಂದ ಮತ್ತು ಅವರಿಗಾಗಿ ವಿಲಾಪಿಸುವುದರಿಂದ ಖುರೈಶಿಗಳು ಜನರನ್ನು ತಡೆದಿದ್ದರು.

ಮತ್ತೊಂದೆಡೆ ವಿಜಯದ ಸುವಾರ್ತೆಯನ್ನು ಮದೀನದ ನಿವಾಸಿಗಳಿಗೆ ಮುಟ್ಟಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮದೀನದ ಎತ್ತರದ ಪ್ರದೇಶಗಳ ಕಡೆಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹ(ರ)ರನ್ನು ಮತ್ತು ತಗ್ಗು ಪ್ರದೇಶಗಳಿಗೆ ಹಝ್ರತ್ ಝೈದ್ ಬಿನ್ ಹಾರಿಸ್(ರ)ರನ್ನು ಕಳುಹಿಸಿದರು.

ಹಝ್ರತ್ ಉಸಾಮ ಬಿನ್ ಝೈದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಪುತ್ರಿಯೂ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ)ರ ಪತ್ನಿಯೂ ಆದ ಹಝ್ರತ್ ರುಖಿಯ(ರ)ರನ್ನು ದಫನ್ ಮಾಡಿ ಖಬರಿನ ಮಣ್ಣು ಸಮಗೊಳಿಸಿ ಮುಗಿಸಿದಾಗ ನಮಗೆ ಈ ವಿಜಯದ ಸುವಾರ್ತೆ ಲಭಿಸಿತು.

ಹಝ್ರತ್ ಪೈಗಂಬರ್(ಸ)ರ ಒಂಟೆಯ ಮೇಲೆ ಸವಾರರಾಗಿ ಹಝ್ರತ್ ಝೈದ್ ಬಿನ್ ಹಾರಿಸ್(ರ) ಮದೀನದಲ್ಲಿ ಪ್ರವೇಶಿಸಿದಾಗ ಕಪಟ ವಿಶ್ವಾಸಿಗಳು ಮತ್ತು ಯಹೂದಿಯರು ಹೀಗೆ ಹೇಳಲು ತೊಡಗಿದರು: "ಮುಸ್ಲಿಮರು ಯುದ್ಧದಲ್ಲಿ ಪರಾಜಿತರಾಗಿರುವರು. ಹಝ್ರತ್ ಪೈಗಂಬರ್(ಸ) ಕೂಡ ಯುದ್ಧದಲ್ಲಿ ವಧಿಸಲ್ಪಟ್ಟಿರುವರು. ಆದ್ದರಿಂದಲೇ ಝೈದ್ ಹಝ್ರತ್ ಪೈಗಂಬರ್(ಸ)ರ ಒಂಟೆಯ ಮೇಲೆ ಸವಾರರಾಗಿ ಬರುತ್ತಿದ್ದಾರೆ" ನಊಧುಬಿಲ್ಲಾಹ್.

ಹಝ್ರತ್ ಝೈದ್ ಬಿನ್ ಹಾರಿಸ(ರ) ವಿಜಯದ ಸಂತೋಷ ವಾರ್ತೆಯನ್ನು ಘೋಷಿಸಿ ಯುದ್ಧದಲ್ಲಿ ವಧಿಸಲ್ಪಟ್ಟ ಖುರೈಶಿ ಮುಖಂಡರ ಹೆಸರುಗಳನ್ನು ಒಂದೊಂದಾಗಿ ತಿಳಿಸಿದಾಗ, ಕಪಟವಿಶ್ವಾಸಿಗಳು ಹೇಳಿದರು: ಹೀಗೆ ಆಗಲು ಹೇಗೆ ಸಾಧ್ಯ? ಯುದ್ಧದಲ್ಲಿ ಮುಸ್ಲಿಮರಿಗೆ ಉಂಟಾದ ಸೋಲು ಮತ್ತು ಹಝ್ರತ್ ಪೈಗಂಬರ್(ಸ) ವಧಿಸಲ್ಪಟ್ಟ ಕಾರಣದಿಂದ ಝೈದ್‌ನಿಗೆ ಹುಚ್ಚು ಹಿಡಿದಿರಬಹುದು.

ವಿಜಯದ ಖುಶಿಯಿಂದ ಮದೀನ ನಿವಾಸಿಗಳು ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸಲಿಕ್ಕಾಗಿ ಮದೀನದಿಂದ ಹೊರಗೆ ವೇಗ ವೇಗವಾಗಿ ಬಂದರು. ಆ ಮುಸ್ಲಿಮರ ಸಂತೋಷ ನೋಡಬೇಕಾದದ್ದೇ ಆಗಿತ್ತು.

ಈ ಯುದ್ಧದಲ್ಲಿ ಮುಸ್ಲಿಮರಿಗೆ ಯುದ್ಧ ಸಂಪತ್ತಾಗಿ 150 ಒಂಟೆಗಳು ಮತ್ತು 10 ಕುದುರೆಗಳು ಲಭಿಸಿದುವು. ಅದಲ್ಲದೇ ಹಲವು ವಿಧದ ಸಾಮಾನುಗಳು, ಆಯುಧಗಳು, ಬಟ್ಟೆಗಳು, ಅನೇಕ ಚರ್ಮಗಳು, ಬಣ್ಣದ ಚರ್ಮಗಳು ಮತ್ತು ಕಂಬಳಿಗಳು ಮುಂತಾದ ವಸ್ತುಗಳು ಕೂಡ ಯುದ್ಧ ಸಂಪತ್ತಾಗಿ ಲಭಿಸಿದ್ದುವು. ಹಝ್ರತ್ ಪೈಗಂಬರ್(ಸ) ತನ್ನ ಪಾಲನ್ನು ಕೂಡ ಇತರ ಸಹಾಬಿಯರಿಗೆ ಸಮವಾಗಿಯೇ ಇರಿಸಿದ್ದರು. ಸಹಾಬಿಯರು ಒಂದು ಖಡ್ಗವನ್ನು ಹಝ್ರತ್ ಪೈಗಂಬರ್(ಸ)ರಿಗಾಗಿ ಇರಿಸಿದರು. ಅದೇ ರೀತಿಯಲ್ಲಿ ಅಬೂಜಹಲಿನ ಬಳಿಯಲ್ಲಿದ್ದ ಒಂದು ಒಂಟೆಯೂ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತ್ತು. ಜೀವನಚರಿತ್ರೆಯ ಗ್ರಂಥಗಳಲ್ಲಿ ಈ ಖಡ್ಗ ಮತ್ತು ಒಂಟೆಗೆ ಸಾಕಷ್ಟು ಪ್ರಾಮುಖ್ಯತೆ ನೀಡಲಾಗಿದೆ. ಆ ಖಡ್ಗದ ಹೆಸರು **ಧುಲ್‌ಫಿಕಾರ್** ಎಂದಾಗಿತ್ತು. ನಂತರದ ಇತರ ಯುದ್ಧಗಳಲ್ಲೂ ಹಝ್ರತ್ ಪೈಗಂಬರ್(ಸ) ಈ ಖಡ್ಗವನ್ನು ತನ್ನ ಬಳಿ ಇರಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಈ ಖಡ್ಗವು ಅಬ್ಬಾಸಿ ಖಲೀಫರ ಬಳಿಯಲ್ಲಿತ್ತು. ಅದೇ ರೀತಿಯಲ್ಲಿ ಆ ಒಂಟೆಯೂ ಹುದೈಬಿಯ ಸಂಧಿಯ ತನಕ ಹಝ್ರತ್ ಪೈಗಂಬರ್(ಸ)ರ ಬಳಿಯಲ್ಲಿತ್ತು. ಹುದೈಬಿಯ ಸಂಧಿಯ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಆ ಒಂಟೆಯನ್ನು ಖುರ್ಬಾನಿಗಾಗಿ ತನ್ನ ಜೊತೆಗೆ ಕೊಂಡು ಹೋಗಿದ್ದರು.

ಯುದ್ಧ ಸಂಪತ್ತನ್ನು ವಿತರಣೆ ಮಾಡುವಾಗ ಹಝ್ರತ್ ಪೈಗಂಬರ್(ಸ) ಹುತಾತ್ಮರ ವಾರಸುದಾರರಿಗೆ ಅವರ ಪಾಲನ್ನು ಕೊಟ್ಟರು. ಅದೇ ರೀತಿಯಲ್ಲಿ ಮದೀನದಲ್ಲಿ ವಿವಿಧ ಹೊಣೆಗಾರಿಕೆಗಳನ್ನು ನಿಭಾಯಿಸುತ್ತಿದ್ದ ಕಾರಣದಿಂದ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗದ ಉಪಅಧಿಕಾರಿಗಳಿಗೆ ಮತ್ತು ಇತರ ಸಹಾಬಿಗಳಿಗೂ ಪಾಲು ನೀಡಲಾಯಿತು.

ಬದ್ರ್ ಯುದ್ಧದ ಕೈದಿಗಳನ್ನು ಪರಿಹಾರ ಧನವನ್ನು ಪಡೆದುಕೊಂಡು ಬಿಡುಗಡೆಗೊಳಿಸಲಾಯಿತು. ಪರಿಹಾರ ಧನದ ಮೊತ್ತ ಒಂದು ಸಾವಿರದಿಂದ ನಾಲ್ಕು ಸಾವಿರ ದಿರ್ಹಮ್‌ನಷ್ಟು ಇತ್ತು. ಪರಿಹಾರ ಧನ ನೀಡಲು ಸಾಧ್ಯವಿಲ್ಲದ ಕೈದಿಗಳು ಮದೀನದ ಮಕ್ಕಳಿಗೆ ಓದುಬರಹ ಕಲಿಸಿದರೆ ಅವರನ್ನು ಬಿಡುಗಡೆಗೊಳಿಸಲಾಗುವುದು ಎಂಬ ನಿಬಂಧನೆ ಹಾಕಲಾಗಿತ್ತು. ಅದೇ ರೀತಿಯಲ್ಲಿ ಕೆಲವು ಕೈದಿಗಳನ್ನು ಕಡಿಮೆ ಪರಿಹಾರ ಧನವನ್ನು ಪಡೆದುಕೊಂಡು ಮತ್ತೆ ಕೆಲವು ಕೈದಿಗಳಿಂದ ಪರಿಹಾರ ಧನವನ್ನು ಪಡೆಯದೆಯೂ ಬಿಡುಗಡೆಗೊಳಿಸಲಾಗಿತ್ತು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಕುರಿತು ಹೀಗೆ ಬರೆದಿರುವರು: ಮದೀನಕ್ಕೆ ತಲಪಿದಾಗ ಕೈದಿಗಳನ್ನು ಏನು ಮಾಡಬೇಕು ಎಂಬುದರ ಬಗ್ಗೆ ಹಝ್ರತ್ ಪೈಗಂಬರ್(ಸ) ಸಮಾಲೋಚನೆ ನಡೆಸಿದರು. ಅರೇಬಿಯದಲ್ಲಿ ಸಾಮಾನ್ಯವಾಗಿ ಕೈದಿಗಳನ್ನು ವಧಿಸುವ ಅಥವಾ ಸ್ಥಾಯಿಯಾಗಿ ಗುಲಾಮರನ್ನಾಗಿ ಮಾಡುವ ಸಂಪ್ರದಾಯವಿತ್ತು. ಆದರೆ ಈ ರೂಢಿ ಹಝ್ರತ್

ಪೈಗಂಬರ್[ಸ]ರಿಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಅದಲ್ಲದೇ ಅದರ ಕುರಿತು ಯಾವುದೇ ದೈವಿಕ ಆದೇಶ ಕೂಡ ಅವತೀರ್ಣಗೊಂಡಿರಲಿಲ್ಲ. ಹಝ್ರತ್ ಅಬೂಬಕರ್[ರ] ಹೇಳಿದರು: ಕೈದಿಗಳಿಂದ ಪರಿಹಾರ ಧನವನ್ನು ಪಡೆದುಕೊಂಡು ಅವರನ್ನು ಬಿಡುಗಡೆಗೊಳಿಸಬೇಕು ಎಂಬುದಾಗಿದೆ ನನ್ನ ಅಭಿಪ್ರಾಯ. ಏಕೆಂದರೆ ಎಷ್ಟಾದರೂ ಈ ಜನರು ನಮ್ಮದೇ ಸಹೋದರೂ ಸಂಬಂಧಿಕರೂ ಆಗಿರುವರು. ನಾಳೆ ಇಸ್ಲಾಮಿನ ಪ್ರೇಮಿಗಳು ಅವರಿಂದಲೇ ಬರಲು ಸಾಧ್ಯವಿದೆ. ಆದರೆ ಹಝ್ರತ್ ಉಮರ್[ರ] ಈ ಅಭಿಪ್ರಾಯವನ್ನು ವಿರೋಧಿಸಿ ಹೀಗೆ ಹೇಳಿದರು: ಧರ್ಮದ ವಿಷಯದಲ್ಲಿ ಸಂಬಂಧಿಕರು ಎಂಬ ರಿಯಾಯಿತಿ ಇರಬಾರದು. ಅವರು ತಮ್ಮ ಕೃತ್ಯಗಳಿಂದ ವಧಾರ್ಹರಾಗಿ ಮಾರ್ಪಟ್ಟಿದ್ದಾರೆ. ಮುಸ್ಲಿಮರು ಸ್ವತಃ ತಮ್ಮ ಕೈಗಳಿಂದ ತಮ್ಮ ತಮ್ಮ ಸಂಬಂಧಿಕರನ್ನು ವಧಿಸಬೇಕು ಎಂದು ಆದೇಶ ನೀಡಬೇಕಾಗಿದೆ. ಹಝ್ರತ್ ಪೈಗಂಬರ್[ಸ] ತನ್ನ ಸಹಜಗುಣವಾದ ಕಾರುಣ್ಯದ ಕಾರಣದಿಂದ ಹಝ್ರತ್ ಅಬೂಬಕರ್[ರ]ರ ಅಭಿಪ್ರಾಯವನ್ನು ಇಷ್ಟಪಟ್ಟರು ಮತ್ತು ವಧಿಸುವುದು ಬೇಡವೆಂಬ ತೀರ್ಮಾನಕ್ಕೆ ಬಂದರು. ತಮ್ಮ ಪರಿಹಾರಧನವನ್ನು ಪಾವತಿ ಮಾಡುವ ಮುಶ್ರಿಕರನ್ನು ಬಿಡುಗಡೆಗೊಳಿಸಲು ಆದೇಶ ನೀಡಿದರು. ಅನಂತರ ಈ ತೀರ್ಪಿನ ಪ್ರಕಾರವೇ ದೈವಿಕ ಆದೇಶ ಅವತೀರ್ಣವಾಯಿತು. ಪ್ರತಿಯೊಬ್ಬ ವ್ಯಕ್ತಿಗೆ ಅನುಯೋಜ್ಯವಾದ ರೀತಿಯಲ್ಲಿ ಒಂದು ಸಾವಿರದಿಂದ ನಾಲ್ಕು ಸಾವಿರ ದಿರ್ಹಮ್‌ನಷ್ಟು ಮೊತ್ತವನ್ನು ಪರಿಹಾರ ಧನವಾಗಿ ನಿಶ್ಚಯಿಸಲಾಯಿತು. ಈ ರೀತಿಯಾಗಿ ಕೈದಿಗಳು ಬಿಡುಗಡೆಗೊಳ್ಳುತ್ತಾ ಹೋದರು.

ಬದ್ರ್ ಯುದ್ಧಕ್ಕೆ ಸಂಬಂಧಿಸಿ ಹೆಚ್ಚಿನ ವಿವರಣೆ ಮುಂದುವರೆಯುವುದು (ಎಂದು ಹೇಳಿದ ನಂತರ ಹುಝೂ಼ರ್ ಇಬ್ಬರು ದಿವಂಗತರ ಬಗ್ಗೆ ಪ್ರಸ್ತಾಪಿದರು ಮತ್ತು ಅವರ ಜನಾಝ಼ ಗ಼ಾಇಬ್ ನಿರ್ವಹಿಸುವುದಾಗಿ ಹೇಳಿದರು. ಅವರ ಮಗ಼್್‌ಫಿರತ್ ಮತ್ತು ಉನ್ನತ ಪದವಿಗಾಗಿ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis[atba]***

*At, **'Masjid Mubarak',** Islamabad, Tilford, UK. On 14-07-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon